ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ವಿದ್ಯಾರ್ಥಿ ನಿಲಯದ ಹೆಸರು	ಮಂಜೂರಾತಿ ಸಂಖ್ಯೆ	ಷರಾ
1)	ಬೈಲಹೊಂಗಲ	1) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನೇಗಿನಾಳ		ಸ್ವಂತ ಕಟ್ಟಡ
		2) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಸ್ತಮರಡಿ.		ಸ್ವಂತ ಕಟ್ಟಡ
		3) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಚಿಕ್ಕಬಳ್ಳಿಕಟ್ಟಿ.		ಕಟ್ಟಡದ ಕಾಮಗಾರಿಯು ಲಿಂಟಲ್ ಮಟ್ಟದಲ್ಲಿದೆ.
2)	ಸವದತ್ತಿ	1) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ		ನಿವೇಶನವನ್ನು ಪಡೆದಿದ್ದು ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ.

ಅಲ್ಪಸಂಖ್ಯಾತರ ಇಲಾಖೆ

ಅಲ್ಪಸಂಖ್ಯಾತರ ಇಲಾಖಾವತಿಯಿಂದ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಯಾವುದೇ ವಿದ್ಯಾರ್ಥಿನಿಲಯಗಳು ನಡೆಯುತ್ತಿರುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ನೇಕಾರರಿಗೆ ಮನೆ ಕಟ್ಟಿಸಿ ಕೊಡುವುದು

1317(1633) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೇಕಾರರಿಗೆ ಮನೆಗಳನ್ನು ಕಟ್ಟಿಕೊಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಹಾಗೂ ಎಷ್ಟು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ನಿರ್ಣಯಿಸಲಾಗಿದೆ?

ಆ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ನೇಕಾರರಿಗೆ ಕಟ್ಟಿಸಿಕೊಡಬೇಕೆಂದು ನಿರ್ಣಯಿಸಲಾಗಿದೆ ಹಾಗೂ ಬೈಲಹೊಂಗಲ ತಾಲ್ಲೂಕು ವಕ್ಕುಂದ ಗ್ರಾಮದಲ್ಲಿ ಎಷ್ಟು ಮನೆ ಕಟ್ಟಿಸಿಕೊಡಬೇಕೆಂದು ನಿರ್ಣಯಿಸಲಾಗಿದೆ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರಾಜ್ಯದಲ್ಲಿನ ಕೈಮಗ್ಗ ನೇಕಾರರಿಗೆ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಹಾಗೂ ಜಿಲ್ಲಾ ವಲಯದ ವಸತಿ ಕಾಲೋನಿ ಯೋಜನೆಗಳಲ್ಲಿ ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲು ಧನಸಹಾಯ ಒದಗಿಸಲಾಗುತ್ತಿದೆ. ಈವರೆಗೆ 3269 ನೇಕಾರರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ. 2002-03ನೇ ಸಾಲಿನಲ್ಲಿ ಕೇಂದ್ರ ವಲಯ ಯೋಜನೆಯಡಿ ರೂ. 250.00 ಲಕ್ಷಗಳು, ಜಿಲ್ಲಾ ವಲಯದಲ್ಲಿ ರೂ. 53.86 ಲಕ್ಷಗಳ ಆಯವ್ಯಯವನ್ನು ಒದಗಿಸಿದ್ದು, ಇದರಲ್ಲಿ 1629 ನೇಕಾರರಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲು ಸಾಧ್ಯವಾಗುತ್ತದೆ.

ಆ) 2002-03ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ 194ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲು ಯೋಜಿಸಲಾಗಿದೆ. ವಕ್ಕುಂದ ಗ್ರಾಮದ ನೇಕಾರರಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡುವ ಬಗ್ಗೆ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ.

ಬೈಲಹೊಂಗಲದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಾಂಪೌಂಡ್ ಕಟ್ಟುವ ಹಾಗೂ ಸಿಬ್ಬಂದಿಗೆ ವಸತಿ ಗೃಹ ನಿರ್ಮಾಣ

1318(1635) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಎಷ್ಟು ಎಕರೆ ಸ್ಥಳವನ್ನು ತೆಗೆದುಕೊಳ್ಳಲಾಗಿದೆ?

2) ಈ ಸ್ಥಳದ ಸುತ್ತಲು ಕಾಂಪೌಂಡ್ ಇಲ್ಲದೆ ಇರುವುದರಿಂದ ಒಂದು ಗಂಟೆಗೆ 30 ರಿಂದ 40 ಸಾವಿರ ರೂ.ಗಳ ಬೆಲೆ ಬಾಳುವ ಈ ಸ್ಥಳ ಅತಿಕ್ರಮಣವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ ಈ ಅತಿಕ್ರಮಣ ತಪ್ಪಿಸಲು ಕೂಡಲೇ ಕಾಂಪೌಂಡ್ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

4) ಈ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹ ಇಲ್ಲದೇ ಇರುವ ಸಂಗತಿ ನಿಜವೇ; ಹಾಗಿದ್ದಲ್ಲಿ, ಕೂಡಲೇ ಅವರಿಗೆ ವಸತಿ ಗೃಹಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) 30 ಎಕರೆ 3 ಗುಂಟೆ

2) ಕಂದಾಯ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಗೆ ನಿವೇಶನವನ್ನು ಹಸ್ತಾಂತರಿಸುವ ಪೂರ್ವದಲ್ಲಿಯೇ ಸರ್ವೆ.ನಂ. 236 ಕ್ಷೇತ್ರದ 14 ಎಕರೆ 3 ಗುಂಟೆ ನಿವೇಶನದಲ್ಲಿ ಸುಮಾರು ಒಂದೂವರೆ ಎಕರೆಯಷ್ಟು ನಿವೇಶನವನ್ನು ಪಕ್ಕದಲ್ಲಿರುವ ರೈತರು:ಜನರು ಅತಿಕ್ರಮಿಸಿದ್ದಾರೆ. ಅದನ್ನು ಹೊರತುಪಡಿಸಿ ಬೇರೆ ಯಾವ ಕಡೆಗೂ ಅತಿಕ್ರಮಣವಾಗಿಲ್ಲ.

3) ನಿವೇಶನಕ್ಕೆ ಪೂರ್ಣ ತಂತಿಬೇಲಿ ಹಾಕಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ಗುತ್ತಿಗೆಯನ್ನು ನೀಡಲಾಗಿದೆ.

4) ನಿಜ. ಸಿಬ್ಬಂದಿ ವಸತಿ ಗೃಹಗಳನ್ನು ನಿರ್ಮಾಣ ಕಾರ್ಯ ಮಾಡಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ಗುತ್ತಿಗೆ ನೀಡಿದೆ. ಇಡೀ ನಿವೇಶನ ಕಲ್ಲಿನ ಸ್ವರೂಪದ್ದಾಗಿದೆ. ಕಲ್ಲನ್ನು ಸಿಡಿಸಿದಾಗ ಹಾಲಿ ನಿರ್ಮಾಣ ಮಾಡಿರುವ ಎರಡು ಕಟ್ಟಡಗಳ ಭದ್ರತೆಗೆ ಹಾನಿಯಾಗುತ್ತದೆ ಎಂದು ಭೂ ಸೇನಾ ನಿಗಮ ಅಭಿಪ್ರಾಯಪಟ್ಟಿದೆ. ತಜ್ಞರ ಅಭಿಪ್ರಾಯ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ವರದಿ ನಿರೀಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕ ಉದ್ದಿಮೆಗಳು ಲೈಸನ್ಸ್ ಪಡೆದು ನಡೆಸಲು ತೊದರೆ ಅನುಭವಿಸುತ್ತಿರುವುದು

1319(1637) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಸಣ್ಣ ಉದ್ದಿಮೆಗಳು ನೋಂದಣಿಯಾಗಿರುತ್ತದೆ (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ಕಳೆದ 2 ವರ್ಷಗಳಲ್ಲಿ ಎಷ್ಟು ಸಣ್ಣ ಉದ್ದಿಮೆಗಳು ಬೆಳಗಾವಿ ಜಿಲ್ಲೆಯಲ್ಲಿ ನೋಂದಣಿಯಾಗಿರುತ್ತದೆ (ತಾಲ್ಲೂಕುವಾರು ಮಾಹಿತಿ ನೀಡುವುದು)?

ಇ) ಬೆಳಗಾವಿ ಜಿಲ್ಲೆಯಲ್ಲಿ ನೋಂದಣಿಯಾದ ಎಷ್ಟು ಸಣ್ಣ ಉದ್ದಿಮೆಗಳು ಕೆಲಸ ಪ್ರಾರಂಭ ಮಾಡಿರುತ್ತವೆ? ಎಷ್ಟು ಸಣ್ಣ ಉದ್ದಿಮೆಗಳು ಕೆಲಸ ಪ್ರಾರಂಭ ಮಾಡಿ ಮುಚ್ಚಿರುತ್ತವೆ (ತಾಲ್ಲೂಕುವಾರು ವಿವರ ಒದಗಿಸುವುದು)?